# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 391/2021

ಪಿ ಡಬ್ಲ್ಯೂ -2

**ದಿನಾಂಕ 30-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎಚ್. ಕೆ. ಸಿ ಪ್ರತಿವಾದಿ ಪರ ವಕೀಲರುಃ**

ನಾನು  ನಂಜನಗೂಡಿನ ಮಹಾದೇವ ನಗರದಲ್ಲಿ ವಾಸವಾಗಿದ್ದೇನೆ. ಸದರಿ ದಾವೆಯನ್ನು ನಮ್ಮ ಮಾವ ಕೃಷ್ಣನಾಯಕ ಜಮೀನಿನ ಸಲುವಾಗಿ ಸಲ್ಲಿಸಿದ್ದಾರೆ.  ನಾನು ಈ ದಾವೆಯ ಕುರಿತು ತಿಳಿದುಕೊಂಡಿದ್ದೇನೆ. ಪ್ರತಿವಾದಿ ಸಲ್ಲಿಸಿರುವ  ಪ್ರತಿವಾದ ಪತ್ರದಲ್ಲಿ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಮನೆಯಲ್ಲಿ ನಾನು, ನನ್ನ ನಾದಿನಿ ಸುಜಾತ, ನನ್ನ ಮಗಳು ನಂದಿತಾ ವಾಸವಾಗಿದ್ದೇವೆ.

2. ನನ್ನ ನಾದಿನಿ ಸುಜಾತಾ ಕೈ ಕಾಲು ಸರಿಯಿರುವುದಿಲ್ಲ ಮತ್ತು ಮಾತನಾಡಲು ಬರುವುದಿಲ್ಲ.  ನಮ್ಮ ಮಾವನವರೇ  ಸುಜಾತರವರನ್ನು ಸೇರಿಸಿ ದಾವೆಯನ್ನು ಸಲ್ಲಿಸಿದ್ದಾರೆ. ನನ್ನನ್ನು ನಮ್ಮ ಮಾವ ಬದುಕಿದ್ದಾಗಲೇ ಸೇರಿಸಿ ದಾವೆ ಸಲ್ಲಿಸಿದ್ದಾರೆ.  ನನ್ನ ಗಂಡ ಮಹಾದೇವ ದಿಃ 18-06-2011 ರಂದು ಮೃತ ಪಟ್ಟಿದ್ದಾರೆ. ನಮ್ಮ ಮಾವ ಅವರು ಜೀವಂತವಾಗಿದ್ದಾಗ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿಯು ಸಹ  ನಂಜನಗೂಡಿನಲ್ಲಿಯೇ ವಾಸವಾಗಿದ್ದರು ಎಂದರೆ ಸರಿ.

3. ನಮ್ಮ ಮಾವ ಅವರ  ಮದುವೆಗೆ ಮುಂಚೆಯೇ ಅವರು ನಂಜನಗೂಡಿಗೆ ಬಂದು ನೆಲೆಸಿರುತ್ತಾರೆ. ನನ್ನ ಗಂಡ ಮೃತ ಪಟ್ಟಾಗ ಅವರಿಗೆ 25 ವರ್ಷ ವಯಸ್ಸು. ನಮ್ಮ ಮಾವನ ಇಬ್ಬರು ಮಕ್ಕಳಲ್ಲಿ ನನ್ನ ಗಂಡ ಮಹಾದೇವ ಹಿರಿಯವರು. ನಮ್ಮ ಮಾವ ಸರ್ವೆ ನಂಬರ 593/3 ರಲ್ಲಿ 25 ಗುಂಟೇ ಜಮೀನು, ಸರ್ವೇ ನಂಬರ ಃ100/1 ರಲ್ಲಿ 38 ಗುಂಟೆ ಜಮೀನು ಮತ್ತು ಒಂದು ಮನೆಗೆ ದಾವೆಯನ್ನು ಸಲ್ಲಿಸಿರುತ್ತಾರೆ.

4. ದಾವಾ ಷೆಡ್ಯೂಲ್ ನ 1 ನೇ ಸ್ವತ್ತು ಹಣಸೋಗೆ ಗ್ರಾಮದಲ್ಲಿದೆ.  ನಮ್ಮ ಮಾವನ ಜೀವಂತವಾಗಿದ್ದಾನ ಅವರ ವ್ಯವಹಾರಗಳ ಕುರಿತು ನನಗೆ ಗೊತ್ತಿಲ್ಲ. ನಮ್ಮ ಮಾವ ಕೃಷ್ಣನಾಯಕನಿಗೆ ಒಬ್ಬರು ಅಣ್ಣ ಮತ್ತು  ಒಬ್ಬರು ತಂಗಿ ಜಯಮ್ಮ.  ನಮ್ಮ ಮಾವ ಅವರ ಜೀವಂತವಾಗಿದ್ದಾಲೆ ದಿಃ  17-04-1998 ರಂದು ತಮಗೆ ಸೇರಿದ ದಾವಾ 1 ಮತ್ತು 2

ಸ್ವತ್ತುಗಳನ್ನು 1 ನೇ ಪ್ರತಿವಾದಿಯ ಗಂಡ ಮೃತ ಸಿದ್ದನಾಯಕರವರಿಗೆ ನೋಂದಾಯಿತ ಹಕ್ಕು ಖುಲಾಸೆ ಪತ್ರದ ಮುಖಾಂತರ ತಮ್ಮ ಹಕ್ಕುಗಳನ್ನು ಬಿಡುಗಡೆ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ನಮ್ಮ ಮಾವ ಸದರಿ ನೋಂದಾಯಿತ ಹಕ್ಕು ಖುಲಾಸೆ ಪತ್ರದ ದಿಃ 17-04-1998 ರಂದು ಬರೆದು ಕೊಡುವ ಕಾಲದಲ್ಲಿ ನನ್ನ ಗಂಡ ಮಹಾದೇವ ಅಪ್ರಾಪ್ತರಾಗಿದ್ದ ಕಾರಣ ಅವರ ಪರವಾಗಿಯೂ ಸಹ ಸದರಿ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ಹೋಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

6. ಸದರಿ ನೋಂದಾಯಿತ ಹಕ್ಕು ಖುಲಾಸೆ ಪತ್ರ ಬರೆದು ಕೊಟ್ಟ ದಿನಾಂಕದಿಂದ ಮೃತ ಸಿದ್ದನಾಯಕರವರು ಅವರ ಜೀವಿತದ ಕಾಲದಲ್ಲಿ ಸದರಿ ಜಮೀನಿಗೆ ಹಕ್ಕು, ಸ್ವಾಧೀನ ಮತ್ತು ಹಿತಾಸಕ್ತಿಯನ್ನು ಹೊಂದಿ ಅವರ ಮರಣದ ತರುವಾಯ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ರಾಜನಾಯಕ ವಂಶಸ್ಥರು ಎಂದು ತಿಳಿಸಲು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ.

7. ಅಸೆಸ್ಮೆಂಟ ನಂಬರ 110 ದಾಖಲೆಯು ಸುಬ್ಬನಾಯಕರವರ ಹೆಸರಿನಲ್ಲಿ ಇದ್ದು ಅವರು ಬದುಕಿರುವ ಮತ್ತು ಮರಣ ಹೊಂದಿರುವ ಯಾವುದೇ ದಾಖಲೆಯನ್ನು ನೀಡಿಲ್ಲ ಸಾಕ್ಷಿ ಮುಂದುವರೆದು ನಮ್ಮ ಮಾವನವರು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ